Half -an- Hour discussion

Hands suffering from alkalinity acidity etc in the State

SRI MD. MOHIMDDIN (Chamarajpet)— MR. SPEAKER Sri, I thank you very much for providing me an half-an- hour discussion on replise to my question No. 117 (d). The remedial measures that are taken by the Government have not even touched the core of the problem. To my question, 117 (d)— The remedial measures that the Government have taken to make the land productive and the amount spent during last two years, the answer given is, The soil conservation wing of the Department of Agriculture has taken up reclamation works out of the funds provided under NREP, RLEGP, CADA funds etc., An amount of Rs. 88.83 lakhs has been spent during the last two years to reclaim approximately 1400 hectares. There is no compreh ensive scheme at present to exclusively deal with this problem on a big scale. Sir, I am not satisfied with this reply and it does out indicate anything, I thought it fit to bring it in the form of half-an-hour discussion.

Soil and water are the two main resources of the erth, and the conservation of these two is very essential. This means and presupposes its wise use and avoidance of waste and its restoration. These resources come under the category exhaustiable and irreplaceable resources. I am laying great emphasis on its restoration and remedial aspects as the efforts of the thanking of Government on this as-pect is neglected as it is mentioned in the replies and annual reports, gives an immpression that the Department has not realsed the potential future danger. This negligence is suicidal and its effects are.—

1. Decline in quality of food grains ;
2. Decline in quantity of food grains ;
3. Failure of crops ;
4. Limiting the choice of crops ;
5. Poor and nutritional imbalance ; fodder effecting the livestocks ;
6. Migration of 25 lakhs of agricultural labourers to cities ;
7. Lakhs of agricultural families under perpetual poverty.

To obtain a sustained growth in agricultural production in terms of increasing productivity and also total output, it is of paramount importance to maintain the health of soil. Lock of attention to health of soil has rendered large areas unproductive and added to this misery are the areas under irrigation due to indiscriminate

water use and unscientific soil management has resulted in accnmulation of salts, and deterioration of soil stucture.

The froblem that our State is facing, is, available land for caultivation ;— 103 lakh hectares. 6% is suffering from unhealthy.

Alkalinity	— 1.5 lakh hectares,
Salinity	— 1.00 lakh hectares,
Acidity	— 4 00 lakh hectares.

Alakalinity.— in northern dry, north-eastern dry and north transition zone.

Salinity.— Hilly and coastal zone.

There is a continuous alarming increase of alkalinity, salinity and acidity every year.

Acids.—

Acid soil need to neutralise and render productive requires periodicol application of lime: at the rate of four tonnes perhectares we need 16 lakh tonnes of lime and the cost being Rs. 400 lakhs. Othrewis, four lakh hectares will go out of cultivation.

Saline and Alkaline —

The area is 2.5 lakh hectares, to correct this, application of gypsum is a must,

1. Gypsum requirement is 8 lakh tonnes casting Rs. 3200 lakhs;

2. Scientific and technical guidance to bleach out the salts by providing proper drainage; which cost, the Department has to determine.

Therefore, the estimated loss due to this factor is to the extent of 6 lakh acres, and the loss in terms of grain production is to the exient of 10 lakh tonnes For the last two year-s we have only spent 88 lakhs and the area reclaimed is 1,400 hectares i.e., not even 25%.

Mico nutrients.—

Study of the micro nutrient status in the soil has not received any attention.

The nutrinet element essential for completion of the normal life eycle of plant are, boron, capper, zinc maganisium etc.

The annual removal micro nutrients from the soil by a crop like paddy is.—

56 grams of boron
76 grams of copper
191 grams of zinc
640 grams of iron
645 grams of magnesium

The Department has not at all done anything in this aspect, expect blindly advocating application of N.P.K.

Defficiency.—

7000 samples analysed and loss due to low yield and nutritional value is estimatad to be around 10 lakh tonnes annually.

I, therefore, further emphasis with all the strength at my command to the potential danger of neglect of soil health. I suggest the following :

1. Map out the ailing soil zone in a scientific and systematic way ;
2. Draw a schedule of operation for reclamation of the identified zone to maintain the continuity.
3. Provide the required quantity of lime and gypsum free of cost to the farmers :
4. Study and ahalyse the micro nutrient status of the soil of Karanataka and take up corrective measures :
5. Please take up soil fertility research programme on top priority basis by involving all others like plant breeders, pathologists, water experts.
6. Please furnish the expenditure in remedying acidic soil, alakiline soil, and salaine soil.

With these words, I conclude and solicit assurance from the Hon'ble Minister on the above suggestions.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕೃಷಿ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಅತ್ಯಂತ ಪ್ರಮುಖವಾಗಿರುವಂತಹ ವಿಷಯವನ್ನು, ಈ ಸದನದ ಮೂಲಕ ಸರಕಾರದ ಗಮನಕ್ಕೆ ತಂದಿದ್ದಾರೆ. ಈಗ ನಾವು ಮಣ್ಣು ಮತ್ತು ನೀರಿನ ವಿಚಾರದಲ್ಲಿ ಹೆಚ್ಚು ಪರಿಣತಿಯನ್ನು ಮತ್ತು ತಂತ್ರಜ್ಞಾನತೆಯನ್ನು ರೂಪಿಸಿಕೊಂಡು ಅವುಗಳ ಸದುಪಯೋಗ ಪಡೆಯದೇ ಹೋದರೆ, ನಾಲ್ಕೂವರೆ ಲಕ್ಷ ಹೆಕ್ಟೇರ್ ವ್ಯಾಪಕವಾಗಿರುವಷ್ಟು ಭೂಮಿ, ಆಮ್ಲತೆ, ಕ್ಷಾರತೆ ಮತ್ತು ಜವುಳುಗಳಿಂದ ಕೂಡಿದ ಪ್ರದೇಶವಾಗಿ ಮಾರ್ಪಟ್ಟು ಹೆಚ್ಚು ಹಿಡುವಳಿಯನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಕೊನೆಯಪಕ್ಷ ಸರಕಾರ ಇದರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿ ಇದನ್ನು ತಡೆಯದೇ ಹೋದರೆ

ಇನ್ನೂ ಅಧಿಕವಾಗಿ ಕರ್ನಾಟಕದ ಉದ್ದಗಲಕ್ಕೂ ಕೂಡಾ ನೀರಾವರಿ ಪ್ರದೇಶದಲ್ಲಿ ಬಹಳ ವ್ಯಾಪಕವಾದ ಅಪಾಯ ಬರುತ್ತದೆ ಎಂಬ ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ. ಅವರ ಮಾತಿನಲ್ಲಿರುವ ಸತ್ಯಾಂಶ ಒಪ್ಪಲೇಬೇಕಾದ ವಿಷಯ. ನಮ್ಮ ತುಂಗಭದ್ರಾ ಅಣೆಕಟ್ಟು ಪ್ರದೇಶ ಒಂದರಲ್ಲಿಯೇ, ೩೫ ಸಾವಿರ ಎಕರೆಯಷ್ಟು ಭೂಮಿ ಈಗಾಗಲೇ ಜವಳು ಮತ್ತು ಕ್ಷಾರದ ಹೊಡೆತಕ್ಕೆ ಒಳಗಾಗಿ ಅಪಾಯಂಕ್ಕೆ ಸಿಕ್ಕಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೂ ಈ ವಿಚಾರಗಳಲ್ಲಿ ನಮ್ಮ ಇಲಾಖೆಯವರು ಅನೇಕ ಸಂದರ್ಭಗಳಲ್ಲಿ ಪುಸ್ತಾಪಗಳನ್ನು ಮಾಡಿದ್ದಾರೆ. ಇದರ ಪ್ರಾತ್ಯಕ್ಷಿಕೆಗಳನ್ನು ಮಾಡಿ ಜನಗಳಿಗೆ ತೋರಿಸಿ ಕೊಟ್ಟಿದ್ದಾರೆ. ಈ ಸಮಸ್ಯೆ ಗಂಭೀರವಾಗಿರತಕ್ಕ ಅರಿವೂ ಕೂಡಾ ಇರುತ್ತದೆ. ಮಾನ್ಯ ಸದಸ್ಯರು ಕಳುಹಿಸಿದಂಥ ಸಲಹೆ ಸೂಚನೆಗಳು ಚೆನ್ನಾಗಿವೆ. ಆದರೆ ಮುಖ್ಯವಾಗಿ ಇರತಕ್ಕಂಥಾದ್ದು ಹಣದ ಅಡಚಣೆ. ಇವತ್ತು ೫೦ ಸಾವಿರ ಹೆಕ್ಟೇರ್‌ಗಳಷ್ಟು ಭೂಮಿ ಕ್ಷಾರ ಪ್ರದೇಶವಾಗಿದೆ, ೧.೫ ಲಕ್ಷ ಹೆಕ್ಟೇರ್ ಭೂಮಿ ಜವಳು ಪ್ರದೇಶವಾಗಿದೆ. ೩ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಮ್ಲತೆ ಉಂಟಾಗಿದೆ. ಇವುಗಳನ್ನು ವ್ಯಾಪಕವಾಗಿ ತಡೆಹಿಡಿಯುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದರೆ, ಒಂದು ಹೆಕ್ಟೇರ್‌ಗೆ ೫ ರಿಂದ ೬ ಸಾವಿರ ರೂಪಾಯಿಗಳ ಖರ್ಚು ಬರುತ್ತದೆ ಎಂಬ ಲೆಕ್ಕಾಚಾರ ಇರುವುದರಿಂದ ೩೦೦ ಕೋಟಿ ರೂಪಾಯಿ ವೆಚ್ಚದ ಯೋಜನೆ ತಯಾರು ಮಾಡಬೇಕಾಗುತ್ತದೆ. ಇಡೀ ಕೃಷಿ ಇಲಾಖೆಗೆ ಕೊಟ್ಟಿರತಕ್ಕಂಥ ಹಣ ೨೨ ರಿಂದ ೨೫ ಕೋಟಿ ರೂಪಾಯಿಗಳಿರುವಂತಹ ಸಂದರ್ಭದಲ್ಲಿ ಮೂರುನೂರು ಕೋಟಿ ವ್ಯವಹಾರ ಆಗಿರುವುದರಿಂದ ಇದನ್ನು ರಾಜ್ಯ ಸರಕಾರದ ಸಂಪನ್ಮೂಲಗಳ ಇತಿಮಿತಿಯಲ್ಲಿ ಕೇಂದ್ರ ಸರಕಾರದ ಸಹಾಯ ಇಲ್ಲದೆ. ನಾವು ಎದುರಿಸುತ್ತೇವೆ ಎನ್ನತಕ್ಕಂಥ ಮಾತು ಹಾಸ್ಯಾಸ್ಪದವಾಗಿರತಕ್ಕಂಥ ಪರಿಸ್ಥಿತಿಯಾಗುತ್ತದೆ, ಎಷ್ಟೇ ಜವಾಬ್ದಾರಿಯನ್ನು ಅರಿತು ಸಲಹೆಗಳನ್ನು ಕೊಟ್ಟರೂ ಕೂಡಾ ಸಂಪನ್ಮೂಲಗಳಿಲ್ಲದೆ ವ್ಯಾಪಕವಾಗಿರತಕ್ಕಂಥ ಕಾರ್ಯಕ್ರಮವನ್ನು ಮಾಡುವುದಕ್ಕೆ ಕೃಷಿ ಇಲಾಖೆಗೆ ಸಾಧ್ಯವಿಲ್ಲ.

೫–೩೦ ಪಿ. ಎಂ.

ಆದರೆ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ ಕೆಳಗೆ, ಹಾಗೂ ಅಚ್ಚುಕಟ್ಟು ಪ್ರದೇಶ, ಪ್ರಾಧಿಕಾರದ ಸಂಪನ್ಮೂಲಗಳ ನೆರವಿನ ಮೂಲಕ, ಉದ್ಯೋಗ ದೃಢೀಕರಣ ಯೋಜನೆ ಮೇಲೆ ೮೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ೧,೪೦,೦೦೦ ಹೆಕ್ಟೇರ್ ಪ್ರದೇಶದಲ್ಲಿರತಕ್ಕಂಥ ಜಾಳು ಮತ್ತು ಆಮ್ಲತೆಯನ್ನು ತೆಗೆದುಹಾಕತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಜಿಲ್ಲಾಧಿಕಾರಿಗಳಿಂದ ಬಂದಿರತಕ್ಕ ಸಂಪನ್ಮೂಲಗಳಿಂದ, ಅಲ್ಲಿರತಕ್ಕ ತೀವ್ರತೆಯನ್ನು ಗಮನಿಸಿ, ಅವುಗಳಿಗೆ ಬೇಕಾಗಿರುವಂಥ ಸಂಪನ್ಮೂಲಗಳನ್ನು ಜಿಲ್ಲಾವಾರು ಯೋಜನೆಗಳಲ್ಲಿ ಆಳವಡಿಸುವಂಥ ಕಾರ್ಯವನ್ನು ಮಾಡಿದ್ದೇವೆ. ಇದು ಇತ್ತೀಚೆಗಷ್ಟೇ ಅಲ್ಲ ಬಹಳ ವರ್ಷಗಳಿಂದಲೂ ಈ ಬಗ್ಗೆ ಯೋಚನೆ ಮಾಡಿದ್ದಾರೆ. ಸುಮಾರು ೨೦೦ ವರ್ಷಗಳ ಹಿಂದೆ, ಗಣಮುಖಿ ಶಿವಾರಿ ಎಂಬ ಆಂಧ್ರ ಪ್ರದೇಶದ ಒಬ್ಬ ಯೋಗಿ ಕೃಷಿಜ್ಞಾನ ಪ್ರದೀಪಿಕೆ ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಭೂಮಿಗೆ ನೀರು ಹೆಚ್ಚಿಗೆ ಕೊಟ್ಟರೆ ಪಿತ್ತ ಜಾಸ್ತಿಯಾಗುತ್ತದೆ ಎಂದು ಬರೆದಿದ್ದಾರೆ. ಅದೇರೀತಿ ಮನುಷ್ಯ ಆಹಾರವನ್ನು ಹೆಚ್ಚಿಗೆ ತೆಗೆದುಕೊಂಡರೂ ಪಿತ್ತ ಹೆಚ್ಚಾಗುತ್ತದೆ. ಆದ್ದರಿಂದ ಹೆಚ್ಚಿಗೆ ನೀರನ್ನು ಬಳಸುವ ಭೂಮಿಗೂ ಪಿತ್ತ ಬರುತ್ತವೆ, ಹೆಚ್ಚು ನೀರನ್ನು ಬಳಸಬಾರದು ಎನ್ನುವ ಮಾತನ್ನು ಹೇಳಿದ್ದಾರೆ. "ಒಡ್ಡಿಲ್ಲದ ಹೊಲ, ಗೊಡ್ಡೆಮ್ಮೆಗೆ ಸಮಾನ" ಎಂಬ ಪಾರಿಭಾಷಿಕ ಗಾದೆಯ ಮಾತನ್ನೂ ಕೂಡ ಬಳಸಿದ್ದಾರೆ. ಸುಮಾರು ೨೦೦–೩೦೦ ವರ್ಷಗಳಿಂದಲೂ ಸಹ ಈ ವಿಚಾರದಲ್ಲಿ ಯೋಚನೆ ಮಾಡಿದ್ದಾರೆ. ಕರ್ನಾಟಕದಲ್ಲಿರತಕ್ಕಂಥ ಪ್ರದೇಶಗಳು ಹೆಚ್ಚು ನೀರಾವರಿಗೆ ಒಳಪಡಿಸಿರುವುದರಿಂದ, ಕಪ್ಪು ಎರೆ ಜಮೀನುಗಳಲ್ಲಿ ಒಂದು ಹುಲ್ಲಿನ ಗರಿಕೆಯನ್ನೂ ಕೂಡ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಒಂದೇ ತಲೆಮಾರಿನಲ್ಲಿ ಇದೆಲ್ಲಾ ಹಾಳಾಗಿರುವುದನ್ನು ಕಾಣುತ್ತಿದ್ದೇವೆ. ೧೯೮೩–೮೪ನೇ ಸಾಲಿನಲ್ಲಿ ಅಚ್ಚುಕಟ್ಟು ಪ್ರದೇಶಗಳ ಪ್ರಾಧಿಕಾರದಲ್ಲಿರತಕ್ಕಂಥ ಅಧಿಕಾರಿಗಳು, ಅಚ್ಚುಕಟ್ಟು ಪ್ರದೇಶಗಳನ್ನು ಅಭಿವೃದ್ಧಿ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಈ ವಿಚಾರದ ನಮಗಿಂತಲೂ ಹೆಚ್ಚು ತಜ್ಞರಾದಂಥ, ವಿಜಯನಗರದ ಅರಸರ ಕಾಲದವರು, ೫೦೦ ವರ್ಷಗಳ ಹಿಂದೆಯೇ ಫಿಗ್ರೆಡಾ ಎಂಬ ಇಂಜಿನಿಯರು ಕಟ್ಟಿರುವ, ವಲ್ಲಭರಾಯ ಅಣೆಕಟ್ಟಿನ ಮೂಲಕ ವಿಜಯನಗರದ ಕಂಪ್ಲಿ ಪ್ರದೇಶದಲ್ಲಿ ನೀರಾವರಿ ಮಾಡುತ್ತಿದ್ದಾರೆ. ಹೊಸಪೇಟೆ ಪ್ರದೇಶದಲ್ಲಿ ಅಳವಡಿಸಿರುವ ತೋಡುಗಾಲುವೆಗಳ ಮೂಲಕ ನೀರನ್ನು ಹಾಯಿಸುವುದರಿಂದ ಅಲ್ಲಿ ಜಾಳು ಭೂಮಿ ಆಗಿಲ್ಲ. ಅನೇಕ

ಬೆಳೆಗಳಿಗೆ ೨–೩ ಇಂಚು ನೀರು ಬಿಡಬೇಕಾದ ಅಗತ್ಯ ಇಲ್ಲ. ನಮ್ಮ ರಾಯಚೂರು ಜಿಲ್ಲೆಯಲ್ಲಿರತಕ್ಕಂಥ ಎರೆ ಪ್ರದೇಶದಲ್ಲಿ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕಪ್ಪು ಭೂಮಿ ಇರತಕ್ಕ ಪ್ರದೇಶಗಳಲ್ಲಿ ಹೆಚ್ಚು ನೀರು ಉಪಯೋಗಿಸಿರುವುದರ ಪರಿಣಾಮವಾಗಿ, ಅಲ್ಲಿಯ ಭೂಮಿ ಜಾಳು ಮತ್ತು ಕ್ಷಾರಕ್ಕೆ ಗುರಿಯಾಗಿರುತ್ತದೆ. ಇದೇರೀತಿ ಚಿಕ್ಕಮಗಳೂರು, ಮಲೆನಾಡು ಪ್ರದೇಶ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ ಈ ಒಂದು ಆವಶ್ಯಕತೆಯ ದೊಡ್ಡ ಪ್ರಶ್ನೆ ಇದೆ. ಇವುಗಳನ್ನು ವ್ಯಾಪಕವಾಗಿ ಅಭಿವೃದ್ಧಿ ಮಾಡಬೇಕೆಂದು ಸಮಗ್ರವಾದ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಕೆಳಗೆ, ೬ನೇ ಪಂಚವಾರ್ಷಿಕ ಯೋಜನೆಯಲ್ಲಿ, ಕೇಂದ್ರ ಸರ್ಕಾರದವರು, ಸೂಪರ್ ಪಾಸ್ಫೇಟ್, ರಾಕ್ ಪಾಸ್ಫೇಟ್ ಗೊಬ್ಬರಗಳನ್ನು ಕೊಳ್ಳುವುದಕ್ಕೆ ಸಹಾಯಧನ ಕೊಡುತ್ತಿದ್ದರು. ಈಗ ಕೇಂದ್ರ ಸರ್ಕಾರದವರು ಸಹಾಯಧನವನ್ನು ನಿಲ್ಲಿಸಿರುವುದರಿಂದ, ರಾಜ್ಯ ಸರ್ಕಾರದ ಸಂಪನ್ಮೂಲಗಳ ಇತಿಮಿತಿಯಲ್ಲಿ ಅಷ್ಟು ವ್ಯಾಪಕವಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳು ಬಹಳ ಉಪಯುಕ್ತವಾಗಿವೆ. ಇವುಗಳಿಗೆ ನಮ್ಮಲ್ಲಿರತಕ್ಕ ಇತಿಮಿತಿಗಳ ವ್ಯಾಪ್ತಿಯಲ್ಲಿ ನಾವೇ ಅತ್ಯಂತ ವ್ಯಾಪಕವಾಗಿ ಮಾಡುವಂತಹ ಕಾರ್ಯಕ್ರಮಗಳ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವಿಗಾಗಿ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಈ ಸದನದ ಮೂಲಕ ಹಾಗೂ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಡಿ. ಜಿ. ಬಸವನಗೌಡ.—ಇದುವರೆಗೂ ಏಕೆ ಯೋಜನೆಯನ್ನು ತಯಾರು ಮಾಡಿಲ್ಲ ?

ಶ್ರೀ ಎಂ. ಪಿ. ಪ್ರಕಾಶ್.—ಈಗಾಗಲೇ ಖರ್ಚಿನ ಯೋಜನೆ ತಯಾರಾಗಿದೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣಕಾಸಿನ ನೆರವಿಗಾಗಿ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದೇನೆ.

ಶ್ರೀ ಮೊಹಮದ್ ಮೊಯಿನುದ್ದೀನ್.—ರೆಮಿಡಿಯಲ್ ಮೆಸರ್ಸ್‌ಗೆ ಎಷ್ಟು ಹಣ ಹಾಕಿದ್ದೀರಿ ? ಎಷ್ಟು ಖರ್ಚು ಮಾಡಿದ್ದೀರಿ ಅದರ ಬಗ್ಗೆ ಪಟ್ಟಿ ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಹಿಂದೆ ಕಳುಹಿಸಿರತಕ್ಕ ಪ್ರಶ್ನೆಗಳಿಗೆ, ತಾಲ್ಲೂಕುವಾರು ಖರ್ಚಿನ ವಿವರಗಳನ್ನು ಕಳುಹಿಸಿಕೊಟ್ಟಿದ್ದೇನೆ. ಬೇರೆ ಬೇರೆ ವಿಚಾರಗಳ ಬಗ್ಗೆ ಅಂದರೆ ಕ್ಷಾರ, ಜಾಳು ಆಗಿರತಕ್ಕಂಥ ಪ್ರದೇಶಗಳ ಬಗ್ಗೆ ಕೇಳಿದ್ದಾರೆ, ಇದನ್ನು ನಂತರ ಕಳುಹಿಸಿಕೊಡುತ್ತೇನೆ.

ಶ್ರೀ ಮೊಹಮದ್ ಮೊಯಿನುದ್ದೀನ್.—ಕೊಟ್ಟಿರುವ ಪಟ್ಟಿಯಲ್ಲಿ ತಾಲ್ಲೂಕು ವೈಸ್ ಕೇಳಿದ್ದರೂ, ತಾಲ್ಲೂಕು ವೈಸ್ ಸರ್ವೆ ಮಾಡಿಲ್ಲ. ಡಿಸ್ಟ್ರಿಕ್ಟ್ ವೈಸ್ ಕೊಟ್ಟಿದ್ದಾರೆ. ಇದರಲ್ಲಿ ಕೆಲವು ಕಡೆ ನಿಲ್, ನಿಲ್ ಎಂದು ಹಾಕಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ೨೩ ಸಾವಿರ ಎಕರೆ ಎಂದು ಕೊಟ್ಟಿದ್ದಾರೆ. ಇದು ನಮಗೆ ಆಶ್ಚರ್ಯವಾಗುತ್ತದೆ.

ANNOUNCEMENT

MR. SPEAKER.—The Business Advisory Committee which met to-day recommneded to transact the business in the House as follows.—

12-2-1986	–	No sitting
13-2-1986	–	Legislative Business – Consideration and passing of Bills.
14-2-1986	–	Discussion under Rule 301 on a matter arising out of the High Court Jndgement in respect of Bottling contract.